ಆರ್.ವೈ.ಎಂ.ಇ.ಸಿಯಲ್ಲಿ ಆಕೃತಿ ತಾಂತ್ರಿಕ ಉತ್ಸವ ನಮ್ಮ ಬಳ್ಳಾರಿ ನಮ್ಮ ಹೆಮ್ಮೆ, ಬಳ್ಳಾರಿ ಅಭಿವೃದ್ಧಿಗೆ ನಾವೆಲ್ಲ ಹೋರಾಟ ಮಾಡೋಣ–ಗಾಲಿ ಲಕ್ಷ್ಮಿ ಅರುಣ

ಬಳ್ಳಾರಿ ನ – ಬಳ್ಳಾರಿ ನಗರದ ಪ್ರತಿಷ್ಠಿತ ರಾವ್ ಬಹದ್ದೂರ್ ವೈ. ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯ ಆರ್ ವೈ ಎಂಇ ಸಿ ಕಾಲೇಜಿನಲ್ಲಿ"ಆಕೃತಿ" ತಾಂತ್ರಿಕ ಉತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಉದ್ಘಾಟನಾ ಕಾರ್ಯಕ್ರಮದಲ್ಲಿ ಗಾಲಿ ಜನಾರ್ದನ ರೆಡ್ಡಿ ಶಾಸಕರು ಗಂಗಾವತಿ, ಶ್ರೀಮತಿ ಗಾಲಿ ಲಕ್ಷ್ಮಿ ಅರುಣ , ಅಲ್ಲಂ ಗುರುಬಸವರಾಜ ಅಧ್ಯಕ್ಷರು, ವಿ.ವಿ. ಸಂಘ, ಬಳ್ಳಾರಿ ಮುಖ್ಯ ಅತಿಥಿ ಡಾ.ಬಿ.ಶಂಭು ಲಿಂಗಪ್ಪ, ಪ್ರಾದೇಶಿಕ ನಿರ್ದೇಶಕರು ವಿಟಿಯು ಪ್ರಾದೇಶಿಕ ಕಚೇರಿ, ಕಲಬುರಗಿ, ಉಪಾಧ್ಯಕ್ಷ ವಿ.ವಿ. ಸಂಘ ಮತ್ತು ಆರ್ ವೈ ಎಂ ಸಿ ಕಾಲೇಜಿನ ಅಧ್ಯಕ್ಷರು ಜಾನೆಕುಂಟೆ ಬಸವರಾಜ, ಡಾ.ಅರವಿಂದ್ ಪಟೇಲ್ ಜಂಟಿ ಕಾರ್ಯದರ್ಶಿ ಯಲ್ಪಿ ಮೇಟಿ ಪಂಪನ ಗೌಡ ಬೈಲುವದ್ದಿಗೇರಿ ಯರ್ರಿಸ್ವಾಮಿ ಖಜಾಂಚಿ ವಿ.ವಿ. ಸಂಘ, ಬಳ್ಳಾರಿ, ಪ್ರಾಂಶುಪಾಲರು ಡಾ ಟಿ ಹನುಮಂತ ರೆಡ್ಡಿ ಎಲ್ಲಾ ವಿಭಾಗದ ಮುಖ್ಯಸ್ಥರು ಭಾಗವಹಿಸಿದ್ದರು.

"ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಯ ಹರಿಕಾರರು ಗಾಲಿ ಜನಾರ್ದನ್ ರೆಡ್ಡಿ ಅವರಿಗೆ ವೀರಶೈವ ವಿದ್ಯಾವರ್ಧಕ ಸಂಘದ ಅಧಿಕಾರಿಗಳಿಗೆ ಹಾಗೂ ಇಂದಿನ ಮುಖ್ಯ ಅತಿಥಿ ಶಂಭುಲಿಂಗಪ್ಪ ಅವರಿಗೆ ಅಭಿನಂದನೆಗಳು, ಇದು ನಾನು ಎರಡನೆಯ ಬಾರಿ ನಿಮ್ಮ ಕಾಲೇಜಿಗೆ ಹಾಗೂ ನಿಮ್ಮ ಕಾಲೇಜಿನ ಕಾರ್ಯಕ್ರಮದಲ್ಲಿ ಭಾಗವಹಿಸುವುದು , ನಮ್ಮ ಅನಿಸಿಕೆ ಏನೆಂದರೆ ನಮ್ಮ ಬಳ್ಳಾರಿ ಜಿಲ್ಲೆ ಪ್ರಪಂಚ ಪುಟದಲ್ಲಿ ಕಾಣಿಸಬೇಕು ಅಷ್ಟರಮಟ್ಟಿಗೆ ಅಭಿವೃದ್ಧಿಯಾಗಬೇಕಾಗಿದೆ , ವಿಜಯನಗರ ಜಿಲ್ಲೆ ಹಾಗೂ ಬಳ್ಳಾರಿ ಜಿಲ್ಲೆ ಉದ್ಯಮ ಕ್ಷೇತ್ರದಲ್ಲಿ ಹೆಸರುವಾಸಿ ಆಗಬೇಕಾಗಿದೆ, ಅಲ್ಲದೆ ಅಂತರ್ಜಾತಿಯ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಬರಬೇಕಾಗಿದೆ ವರ್ಷಗಳಾದವು ಬರಲಿಲ್ಲ,

ಈ ಕೆಲವೊಂದು ಬೇಡಿಕೆಗಳಿಗಾಗಿ ನಾವು ಹೋರಾಟ ಮಾಡುತ್ತಿದ್ದೇವೆ ಇನ್ನೂ ಬರಲಿಲ್ಲ ಆದರೂ ನಾವು ನಿಲ್ಲುವುದಿಲ್ಲ ಹಾಗೆಯೇ ಬಳ್ಳಾರಿಗೆ ಸೌರಶಕ್ತಿಯ ಸೌರ ಕೇಂದ್ರ, ಜೀನ್ಸ್ ಬಟ್ಟೆಗಳ ಕೇಂದ್ರ ಆಗಬೇಕಾಗಿದೆ, ಇಂದಿನ ಯುವತಿ ಯುವಕರು ಭವಿಷ್ಯದ ಬೆಳಕು, ಆದ್ದರಿಂದ ನಮ್ಮ ಬಳ್ಳಾರಿ ನಮ್ಮ ಹೆಮ್ಮೆಯ ಬಳ್ಳಾರಿ ಅಭಿವೃದ್ಧಿಪಡಿಸಲು ನಾವೆಲ್ಲ ಹೋರಾಟ ಮಾಡೋಣ ಎಲ್ಲರಿಗೂ ಶುಭಾಶಯಗಳು" ಎಂದು ಶ್ರೀಮತಿ ಗಾಲಿ ಲಕ್ಷ್ಮಿ ಅರುಣ ಅವರುಗಳು ಮಾತನಾಡಿದರು.

ಗಾಲಿ ಜನಾರ್ದನ ರೆಡ್ಡಿ ಶಾಸಕರು ಗಂಗಾವತಿ ಇವರು ಮಾತನಾಡುತ್ತಾ "ಹಲವು ವರ್ಷಗಳ ನಂತರ ನಾನು ನಮ್ಮ ಬಳ್ಳಾರಿಗೆ ಬಂದಿರುವುದು ಇಂದಿನ ಯುವತೆ ಭವಿಷ್ಯದ ನಾಳಿನ ಭಾರತದ ಅಮೂಲ್ಯ ಪ್ರಜೆಗಳು, ಇಲ್ಲಿ ರಾಜಕೀಯ ಬಿಟ್ಟರೆ ,ಬಳ್ಳಾರಿ ಜಿಲ್ಲೆಯ ಖನಿಜ ಸಂಪತ್ತು ಗೆ ಹಾಗೂ ನೈಸರ್ಗಿಕ ಸಂಪತ್ತುಗಳಾದ ಧಾನ್ಯಗಳಿಗೆ ಹೆಸರುವಾಸಿಯಾಗಿದೆ, ನಮ್ಮ ನೈಸರ್ಗಿಕ ಸಂಪನ್ಮೂಲಗಳು ಜಪಾನ್ ಮತ್ತು ಚೀನಾದಂತಹ ದೇಶಗಳಿಗೆ ಹೋಗುತ್ತಿವೆ, ಹೊಸ ರೂಪಕ್ಕೆ ಮಾರ್ಪಡಿಸುತ್ತಿವೆ ಮತ್ತು ನಮ್ಮ ಭಾರತಕ್ಕೆ ಹೆಚ್ಚಿನ ಬೆಲೆಗೆ ಹಿಂತಿರುಗುತ್ತಿವೆ. ಇದನ್ನು ನಾವು ಹಿಮ್ಮೆಟ್ಟಿಸಬೇಕು, ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಮತ್ತು ಆ ಮೂಲಕ ಉದಯೋನ್ಮುಖ ಯುವ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶಗಳು,

ಉದ್ಯಮಶೀಲ ಅವಕಾಶಗಳನ್ನು ಒದಗಿಸುವ ಮೂಲಕ ಇದು ಸಾಧ್ಯ. ಮುಖ್ಯವಾಗಿ ಮುಖ್ಯವಾಗಿ ಇಲ್ಲಿನ ಇಂಜಿನಿಯರಿಂಗ್ ವಿದ್ಯಾರ್ಥಿಗಳು ತಮ್ಮ ವೃದ್ಧಿ ಅಭಿವೃದ್ಧಿಯಾಗಬೇಕು ಎಂಬುದು ನಮ್ಮ ಅಭಿಲಾಷೆ, ನಮ್ಮ ಖನಿಜ ಸಂಪತ್ತು ನಮ್ಮ ದೇಶದ ಅಭಿವೃದ್ಧಿಗೆ ಆಗಬೇಕು ಪಟ್ಟಿಗಳ ಈಗ ಬಳ್ಳಾರಿ ನಲ್ಲಿ ಜಿಂದಾಲ್ ಬಂದು ಸುಮಾರು ಒಂದು ಲಕ್ಷ ಇವತ್ತಿಗೆ ಜೀವನೋಪಾಯ ಬಂದಿದೆ ಹಾಗೆ ಇನ್ನೂ ಇತರ ನಾಲ್ಕೈದು 4 ಅಥವಾ 5 ಹೆಸರಾಂತ ಉದ್ಯಮಗಳು ಬಂದರೆ ಇನ್ನೂ 4 ಲಕ್ಷ ವಿದ್ಯಾರ್ಥಿಗಳಿಗೆ ಜೀವನೋಪಾಯ ಆಗುತ್ತದೆ , ಇನ್ನು ಕಾಲ ಮಿಂಚಿಲ್ಲ ,ಬರೋ ದಿನಗಳಲ್ಲಿ ನಾವೆಲ್ಲ ರಾಜಕಾರಣಿಗಳು ಮೂಡಿ ಒಟ್ಟಾಗಿ ಹೋರಾಟ ಮಾಡಿದರೆ , ಮನಸಿಟ್ಟು ಕೆಲಸ ಮಾಡಿದರೆ ಪ್ರಪಂಚದಲ್ಲೇ, ಬಳ್ಳಾರಿ ಜಿಲ್ಲೆಯ ಹೆಸರುವಾಸಿ ಆಗುವುದರಲ್ಲಿ ಯಾವ ಸಂಶಯವೂ ಇಲ್ಲ, ಹಾಗೆಯೇ ಉತ್ತರ ಕರ್ನಾಟಕ ಜಿಲ್ಲೆಗಳು ಹಾಗೂ ನೆರೆಯ ರಾಜ್ಯಗಳ ಜಿಲ್ಲೆಗಳು ಕೂಡ ಅಭಿವೃದ್ಧಿ ಆಗುತ್ತವೆ "ಎಂದು ಕರೆ ನೀಡಿದರು.

ಶಂಭುಲಿಂಗಪ್ಪ ಮುಖ್ಯ ಅತಿಥಿಗಳು ಮಾತನಾಡುತ್ತಾ "ಇಂದಿನ ಜನಪ್ರಿಯ ಭಾರತ ದೇಶದ ವಿದ್ಯಾರ್ಥಿಗಳು ಕೇವಲ ಭಾರತ ದೇಶಕ್ಕೆ ಸೀಮಿತವಾಗದೆ ವಿಶ್ವ ವ್ಯಾಪ್ತ ವಾಗಿ ಉದ್ಯಮ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಹೆಸರುವಾಸಿ ಮಾಡುವುದು ಅವಶ್ಯಕವಾಗಿದೆ , ಕೇವಲ ಪದವೀಧರರಾದರು ನಿಮಗೆ ಒಂದು ಪಾಸ್ಪೋರ್ಟ್ ಬಂದಂತಹ ವಿದೇಶಗಳಲ್ಲಿ ಹೋಗಿ ಹೆಸರುವಾಸಿ ಆಗಬೇಕೆಂದರೆ ಸ್ಕಿಲ್ಸ್ ನೈಪುಣ್ಯತೆಗಳು ಬೆಳೆಯಬೇಕು , ಇಂದಿನ ದಿನಗಳಲ್ಲಿ ಹೆಸರುವಾಸಿಯಾದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪದವೀಧರರಿಗೆ ಉದ್ಯೋಗ ಸಿಗುತ್ತಿಲ್ಲ , ಅದಕ್ಕೆ ಕಾರಣ ಪಠ್ಯೇತರ ಚಟುವಟಿಕೆಗಳಾದ ಇಂತಹ ಟೆಕ್ನಿಕಲ್ ಫೆಸ್ಟಗಳು – ತಾಂತ್ರಿಕ ಉತ್ಸವಗಳು ಅವಶ್ಯಕವಾಗಿದೆ ,

ಸಾಮಾನ್ಯವಾಗಿ ಉದ್ಯಮ ಕ್ಷೇತ್ರದಲ್ಲಿ ಅಧಿಕಾರಗಳು ಹೇಳುವುದು ಏನೆಂದರೆ ನಮ್ಮ ವಿದ್ಯಾರ್ಥಿಗಳು ನಮ್ಮ ಭಾರತ ದೇಶದ ವಿದ್ಯಾರ್ಥಿಗಳು ಉದ್ಯಮ ಕ್ಷೇತ್ರದಲ್ಲಿ ಸಾಕಷ್ಟು ಸಾಕಷ್ಟು ಪಠ್ಯೇತರ ನೈಪುಣ್ಯಗಳನ್ನು ಒಂದಿಲ್ಲ ಅದಕ್ಕೆ ಕಾರಣ ಇಂತಹ ಟೆಕ್ನಿಕಲ್ ಫೆಸ್ಟಗಳು ನಡೆಯಬೇಕು ಮುಂದಿನ ದಿನಗಳಲ್ಲಿ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ಸಂಸ್ಥೆಯು ಸ್ವಯಂ ಪ್ರತಿಪದ್ಯ ತೆ ಪಡೆದು ತನ್ನದೇ ಆದ ಅಕ್ಯಾಡೆಮಿಕ್ ಡಿಸೈನ್ ಮಾಡಿ ಸಮಾಜದ ಸವಾಲುಗಳನ್ನು ಉತ್ತರ ನೀಡುವುದರಲ್ಲಿ ಯಶಸ್ವಿಯಾಗುವುದು ನನ್ನ ಅನಿಸಿಕೆ "ಎಂದು ಮಾತನಾಡಿದರು.

ಇದೇ ಸಂದರ್ಭದಲ್ಲಿ ಜಾನೆ ಕುಂಟೆ ಬಸವರಾಜ್ ಅಧ್ಯಕ್ಷರು ಮಾತನಾಡಿ "ನಾವು ಓದುವಾಗ ಇಂತಹ ಅವಕಾಶಗಳು ಇದ್ದಿಲ್ಲ ಕೇವಲ ಓದು ಓದು ಅದಕ್ಕೆ ಸೀಮಿತವಾಗಿದೆ ಈಗ ಕಾಲ ಬದಲಾವಣೆಯಾಗಿದೆ ,

ಪದವೀಧರರಾಗಿ ಇನ್ನಿತರೆ ನೈಪುಣ್ಯತೆ ಗಳನ್ನು ಹೊಂದಬೇಕಾಗಿದೆ ಅಲ್ಲದೆ ಉದ್ಯಮ ಕ್ಷೇತ್ರದಲ್ಲಿ ಹೊಸ ಉದ್ಯಮ ಅವಕಾಶಗಳನ್ನು ಸೃಷ್ಟಿಸಬೇಕಾಗಿದೆ ಆಗ ನಮ್ಮ ಭಾರತ ದೇಶವು ವಿಶ್ವ ವ್ಯಾಪ್ತಿಯಲ್ಲಿ ಅಂತರರಾಷ್ಟ್ರೀಯಮಟ್ಟದಲ್ಲಿ ಮೂರನೇ ಅತ್ಯುತ್ತಮ ಎಕನಾಮಿಕ್ ಕಂಟ್ರಿ ಆಗುವುದರಲ್ಲಿ ಸಂಶಯವಿಲ್ಲ " ಎಂದು ನುಡಿದರು.

ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಅಲ್ಲಂ ಗುರುಬಸವರಾಜ್ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮಾತನಾಡುತ್ತಾ "ನಮ್ಮ ವೀರಶೈವ ವಿದ್ಯಾವರ್ಧಕ ಸಂಘದ ಯಾವುದೇ ವಿದ್ಯಾರ್ಥಿ ಎಲ್ಲೇ ಹೋದರು ಪ್ರತಿ ಹತ್ತು ಜನದಲ್ಲಿ ಒಬ್ಬರಾಗಿ ಕಾಣಿಸಿಕೊಳ್ಳುವುದು ನಮಗೆ ತುಂಬಾ ಸಂತೋಷವಾಗಿದೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಮೆಷಿನ್ ಲರ್ನಿಂಗ್ ಎನ್ನುವುದು ಹೊಸದು ಹಾಗೆಯೇ ಮುಂದಿನ ದಿನಗಳಲ್ಲಿ ನೀವು ನಿಮ್ಮ ನಿಮ್ಮ ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಹೊಸದನ್ನು ತಯಾರು ಮಾಡಬೇಕೆಂದು ನಾನು ಕೋರುತ್ತೇನೆ ಸಮಾಜಕ್ಕೆ ಸಮಾಜದ ಅಭಿವೃದ್ಧಿಗೆ ಹಾಗೆ ನಿಮ್ಮ ಮುಂದಿನ ದಿನಗಳಲ್ಲಿ ಉತ್ತಮ ಪ್ರಯೋಜಕ ರಾಗಿ ದೇಶ–ವಿದೇಶಗಳಲ್ಲಿ ಹೆಸರುವಾಸಿ ಮಾಡಬೇಕೆಂದು ನಮ್ಮ ಆಶಯಗಳು ನಮ್ಮ ಆರ್ ವೈ ಎಂ ಸಿ ಕಾಲೇಜಿನ ಸುತ್ತಮುತ್ತ ಕಾಲೇಜುಗಳಲ್ಲಿ ಹೆಸರುವಾಸಿಯಾಗಿದೆ ನಮ್ಮ ಸಂಸ್ಥೆಯ ಒಳ್ಳೆಯ ಹೆಸರಿಗೆ ಹಿಂದಿನ ವಿದ್ಯಾರ್ಥಿಗಳು ಕಾರಣವಾಗಿದ್ದಾರೆ ಹಾಗೆಯೇ ಮುಂದಿನ ದಿನಗಳಲ್ಲಿ ನೀವು ನಮ್ಮ ಸಂಸ್ಥೆಯ ಒಳ್ಳೆಯ ಹೆಸರು ಸಮಾಜಸೇವಕರು ಆಗಬೇಕೆಂದು ಕೋರುತ್ತೇನೆ ಎಂದು ನುಡಿದರು "ಆರಂಭದಲ್ಲಿ ಡಾ ಟಿ ಹನುಮಂತ ರೆಡ್ಡಿ ಎಲ್ಲಾ ಅತಿಥಿಗಳು, ವಿದ್ಯಾರ್ಥಿಗಳನ್ನು ಆಹ್ವಾನಿಸಿದರು, ಅಂತ್ಯದಲ್ಲಿ ಡಾಕ್ಟರ್ ಸುಮಂಗಳ ವಂದಿಸಿದರು.

ಬಟ್ಟೆ ಹರಿದು ಮಹಿಳೆ ಮೇಲೆ ಹಲ್ಲೆ

ಬೆಳಗಾವಿ: ಕುಂದಾ ನಗರಿ ಬೆಳಗಾವಿಯಲ್ಲಿ ಮತ್ತೊಂದು ಅಮಾನವೀಯ ಘಟನೆ ನಡೆದಿದೆ. ಬೆಳಗಾವಿಯ ವಡ್ಡರವಾಡಿಯಲ್ಲಿ ವೇಶ್ಯಾವಾಟಿಕೆಯ ಆರೋಪ ಹೊರಿಸಿ ಮಹಿಳೆಯೊಬ್ಬರ ಮೇಲೆ ಹಲ್ಲೆ ಮಾಡಿದ್ದಲ್ಲದೆ, ಸಾರ್ವಜನಕವಾಗಿ ಬಟ್ಟೆ ಹರಿದು ಹಾಕಲಾಗಿದೆ. ನೆರೆ ಮನೆಯವರೇ ಹಲ್ಲೆ ಮಾಡಿದ್ದಾರೆ ಎನ್ನಲಾಗಿದ್ದು, ಕೃತ್ಯದ ವಿಡಿಯೋ ಮೊಬೈಲ್? ಫೋನ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಆರಂಭದಲ್ಲಿ ದೂರು ದಾಖಲಿಸಲು ಪೊಲೀಸರು ಹಿಂದೇಟು ಹಾಕಿದ್ದರು ಎಂಬ ಆರೋಪವೂ ಕೇಳಿ ಬಂದಿದ್ದು, ಸದ್ಯ ಮಾಳಮಾರುತಿ ಪೊಲೀಸ್? ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳಗಾವಿಯ ವಡ್ಡರವಾಡಿಯ ಮನೆಯೊಂದರಲ್ಲಿ ಬಾಲಕಿಯೊಬ್ಬಳ ಜತೆ ನಾಲ್ವರು ನಾಲ್ಕು ವರ್ಷಗಳಿಂದ ವಾಸವಾಗಿದ್ದಾರೆ. ಅಲ್ಲೇ ಪಕ್ಕದಲ್ಲಿ ವಾಸವಿರುವ ಮತ್ತೊಂದು ಕುಟುಂಬದವರು, ಮಹಿಳೆಯ ವಿರುದ್ಧ ವೇಶ್ಯಾವಾಟಿಕೆಯ ಆರೋಪ ಮಾಡಿದ್ದಾರೆ. ಅಷ್ಟೇ ಅಲ್ಲದೆ, ಮನೆಗೆ ನುಗ್ಗಿ ತಾಯಿ, ಮಗಳನ್ನು ಹೊರಗೆ ಎಳೆದು ತಂದು ಹಲ್ಲೆ ಮಾಡಿ ಅಟ್ಟಹಾಸ ಮೆರೆದಿದ್ದಾರೆ.

ಸಂಬಂಧ ಇಲ್ಲದವರೆಲ್ಲಾ ಆ ಮಹಿಳೆಯರ ಮನೆಗೆ ಬಂದು ಹೋಗುತ್ತಾರೆ. ಮಹಿಳೆಯರು ವೇಶ್ಯಾವಾಟಿಕೆ ದಂಧೆ ಮಾಡುತ್ತಿದ್ದಾರೆ ಎಂದು ಆರೋಪಿಸಿದ ನೆರೆ ಮನೆಯವರು ತಾಯಿ–ಮಗಳನ್ನ ಮನೆ ಬಿಡಿಸಲು ಜಗಳ ತೆಗೆದಿದ್ದಾರೆ. ಜಗಳ ವಿಕೋಪಕ್ಕೆ ತಿರುಗಿದ್ದು, ಸಾರ್ವಜನಕವಾಗಿ ಮಹಿಳೆಯ ಬಟ್ಟೆ ಹರಿದು ಹಾಕಿ ಹಲ್ಲೆ ಮಾಡಲಾಗಿದೆ. ಘಟನೆಯ ದೃಶ್ಯ ಮೊಬೈಲ್ ಫೋನ್?ನಲ್ಲಿ ರೆಕಾರ್ಡ್ ಆಗಿದೆ.

ಹಲ್ಲೆಗೊಳಗಾದ ಬಳಿಕ ಮಹಿಳೆಯು ದೂರು ನೀಡಲು ಸಮೀಪದ ಮಾಳಮಾರುತಿ ಪೊಲೀಸ್ ಠಾಣೆಗೆ ತೆರಳಿದ್ದರು. ಆದರೆ, 2 ದಿನ ಪೊಲೀಸ್ ಠಾಣೆಗೆ ಅಲೆದರೂ ದೂರು ಸ್ವೀಕರಿಸಲು ನಿರಾಕರಿಸಲಾಗಿತ್ತು ಎಂಬ ಆರೋಪ ಕೇಳಿಬಂದಿದೆ. ಹೀಗಾಗಿ ಮಹಿಳೆ, 'ಜೀವ ಭಯ ಇದೆ, ರಕ್ಷಣೆ ಕೊಡಿ' ಎಂದು ಮನವಿ ಬೆಳಗಾವಿ ಕಮಿಷನರ್?ಗೆ ದೂರು ನೀಡಿದ್ದರು. ನಂತರ ಇದೀಗ ಕಮಿಷನರ್? ಸೂಚನೆ ಮೇರೆಗೆ ಶುಕ್ರವಾರ ರಾತ್ರಿ ಮೂವರ ವಿರುದ್ಧ ಎಫ್?ಐಆರ್ ದಾಖಲಿಸಲಾಗಿದೆ.

ಬಿಎನ್ ಎಸ್ ಕಾಯ್ದೆಯ ಸೆಕ್ಷನ್ 115(2), 3(5), 331, 352 ಹಾಗೂ 74 ರ ಅಡಿ ಪ್ರಕರಣ ದಾಖಲಿಸಿರುವ ಪೊಲೀಸರು, ತನಿಖೆ ಆರಂಭಿಸಿದ್ದಾರೆ. ಬೆಳಗಾವಿ ತಾಲೂಕಿನ ವಂಟಮೂರಿ ಗ್ರಾಮದಲ್ಲಿ ಮಹಿಳೆಯನ್ನ ಬೆತ್ತಲೆಗೊಳಿಸಿ ಹಲ್ಲೆ ಮಾಡಿದ ಘಟನೆ ಕಳೆದ ವರ್ಷ ದೇಶದಾದ್ಯಂತ ವ್ಯಾಪಕ ಚರ್ಚೆಗೆ ಗ್ರಾಸವಾಗಿತ್ತು. ಇದೀಗ ಜಿಲ್ಲೆಯಲ್ಲಿ ಮತ್ತೊಂದು ಅಮಾನವೀಯ ಘಟನೆ ನಡೆದಿದೆ.

ಸ್ಪರ್ಶ ವೆಬ್‌ಸೈಟ್: ನವೆಂಬರ್ 21ರಿಂದ ತೊಂದರೆ ನಿವಾರಣೆ ಕಾರ್ಯಕ್ರಮ

ವಿಜಯಪುರ, ನವೆಂಬರ್ : ಮುಖ್ಯ ರಕ್ಷಾ ಲೇಖಾ ನಿಯಂತ್ರಕರು ಬೆಂಗಳೂರು ಇವರ ವತಿಯಿಂದ ಬೆಳಗಾವಿಯ ಮರಾಠಾ ಲೈಟ್ ಇನಫೆಂಟ್ರಿ ರೆಜಿಮೆಂಟಲ್ ಸೆಂಟರ್‌ನ ಸರಕತ ಆಡಿಟೋರಿಯಮ್‌ನಲ್ಲಿ ನವೆಂಬರ್ 20 ಹಾಗೂ 21ರಂದು ರಂದು ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರು ಸ್ಪರ್ಶ ವೆಬ್‌ಸೈಟ್‌ನಲ್ಲಿ ಜೀವಿತ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಹಾಗೂ ಎದುರಿಸುತ್ತಿರುವ ಸಮಸ್ಯೆ ನಿವಾರಣೆಗಾಗಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದ ಕುರಿತಾಗಿ ಪಿಂಚಣಿ ಪಡೆಯುತ್ತಿರುವ ವಿಜಯಪುರದ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರು ಹೆಚ್ಚಿನ ಮಾಹಿತಿಗಾಗಿ ವಿಜಯಪುರದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯನ್ನು ಸಂಪರ್ಕಿಸಬಹುದಾಗಿದೆ ಎಂದು ವಿಜಯಪುರದ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರ ಪ್ರಕಟಣೆ ತಿಳಿಸಿದೆ.

ತೋಟಗಾರಿಕೆ ಚಟುವಟಿಕೆಗಳಿಗೆ ಆಸಕ್ತ ರೈತರಿಂದ ಅರ್ಜಿ ಅಹ್ವಾನ

ವಿಜಯನಗರ (ಹೊಸಪೇಟೆ), ನ–: ಹೊಸಪೇಟೆ ತಾಲೂಕಿನ ಗಣಿಭಾದಿತ 33 ಗ್ರಾಮಗಳಲ್ಲಿ ಸಮಗ್ರ ಗಣಿ ಪರಿಸರ ಪುನಶ್ಚೇತನ ಯೋಜನೆಯಡಿ (ಸಿಇಪಿಎಂಐಜೆಡ್) ತೋಟಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಆಸಕ್ತ ರೈತರಿಂದ ಅರ್ಜಿ ಅಹ್ವಾನಿಸಿದೆ.

ತೋಟಗಾರಿಕೆ ಚಟುವಟಿಕೆಗಳಾದ ಪ್ರದೇಶ ವಿಸ್ತರಣೆ, ಕೃಷಿ ಹೊಂಡ ನಿರ್ಮಾಣ, ಪ್ಯಾಕ್ ಹೌಸ್, ಈರುಳ್ಳಿ ಶೇಖರಣಾ ಘಟಕ, ಜೇನು ಸಾಕಾಣಿಕೆ, ಅಣಬೆ ಬೇಸಾಯ, ಹಾಗೂ ಇತರೆ ಸೌಲಭ್ಯಗಳಿಗೆ ಆಸಕ್ತ ರೈತರು ಕೂಡಲೇ ತೋಟಗಾರಿಕೆ ಇಲಾಖೆ ಹೊಸಪೇಟೆ ಸಂಪರ್ಕಿಸಿ ಅರ್ಜಿ ಸಲ್ಲಿಸಿ ಹೆಸರನ್ನು ನೊಂದಾಯಿಸಿಕೊಳ್ಳಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ಆಯಾ ಹೋಬಳಿಯ ತೋಟಗಾರಿಕೆ ಇಲಾಖೆ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕ ಕೇಂದ್ರ ಹೊಸಪೇಟೆ, ಮರಿಯಮ್ಮನಹಳ್ಳಿ, ಕಮಲಾಪುರ, ಸೇರಿದಂತೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ, ಹೊಸಪೇಟೆ ಇಲ್ಲಿ ಸಂಪರ್ಕಿಸಲು ತಿಳಿಸಿದ್ದಾರೆ.

ಬಾಲಕಿಯ ಸಂಕಷ್ಟಕ್ಕೆ ತಕ್ಷಣ ಸ್ಪಂದನೆ: ಮಾನವೀಯತೆ ಮೆರೆದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್

ಬೆಳಗಾವಿ : ತನ್ನ ಓದುವ ಹುಮ್ಮಸ್ಸಿಗೆ ಅಡ್ಡಿಯಾಗಿರುವ ಸ್ವಂತ ತಂದೆಯ ಕಿರುಕುಳ ತಾಳಲಾರದೆ ತಮ್ಮ ಬಳಿಗೆ ಬಂದ 12 ವರ್ಷದ ಬಾಲಕಿಯ ಕಷ್ಟಕ್ಕೆ ತಕ್ಷಣ ಸ್ಪಂದಿಸಿ ಪರಿಹಾರ ಒದಗಿಸುವ ಮೂಲಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಮಾನವೀಯತೆ ತೋರಿದ್ದಾರೆ. ಶುಕ್ರವಾರ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಕ್ಷೇತ್ರದ ವಿವಿಧ ಭಾಗಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಪೂಜೆ ನೆರವೇರಿಸಿ ಮನೆಗೆ ಆಗಮಿಸಿದಾಗ ಬಾಲಕಿಯೊಬ್ಬಳು ತನ್ನ ಅಜ್ಜಿಯ ಜೊತೆಗೆ ನಿಂತಿದ್ದಳು. ಹಿರೇಬಾಗೇವಾಡಿಯವಳಾದ ಬಾಲಕಿಯ ತಂದೆ ನಿತ್ಯ ಕುಡಿದು ಬಂದು ಬಾಲಕಿಗೆ ಮತ್ತು ಆಕೆಯ ತಾಯಿಗೆ ಹಿಂಸೆ ನೀಡುತ್ತಿದ್ದ. ಇದರಿಂದ ಬೇಸತ್ತ ತಾಯಿ ತವರು ಮನೆ ಸೇರಿದಳು. ಆದರೆ, ಹಿರೇಬಾಗೇವಾಡಿಯ ಖಾಸಗಿ ಶಾಲೆಯಲ್ಲಿ 6ನೇ ತರಗತಿ ಓದುತ್ತಿರುವ ಬಾಲಕಿ ಓದು ಬಿಟ್ಟು ಹೋಗಲು ಒಪ್ಪಲಿಲ್ಲ. ಆದರೆ ತಂದೆಯ ಹಿಂಸೆಯನ್ನು ಸಹಿಸುವುದೂ ಸಾಧ್ಯವಿರಲಿಲ್ಲ. ಹಾಗಾಗಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ಬಳಿ ಹೋದರೆ ಏನಾದರೂ ಪರಿಹಾರ ಸಿಗಬಹುದು ಎಂದು ಅಜ್ಜಿಯನ್ನು ಕರೆದುಕೊಂಡು ಬಂದಿದ್ದಳು. ಅ